ಅದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಎಸ್.ಸುರೇಶ್‌ಕುಮಾರ್: ಸಬ್ ಸೆಕ್ಷನ್ 6 ಅನ್ನು ಕೋರ್ಟ್ ರದ್ದು ಮಾಡಿದ್ದರಿಂದ ಶೂನ್ಯ ಉಂಟಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಸರ್ಕಾರ ಏನೊಂದು ತಪ್ಪು ಮಾಡಿತ್ತೋ ಅದನ್ನು ಸರಿಮಾಡಿಕೊಳ್ಳುವುದಕ್ಕೆ ಅದಕ್ಕೆ ಅವಕಾಶ ಇತ್ತು. ಆದರೆ ಸರ್ಕಾರ ತನ್ನ ತಪ್ಪನ್ನು ಸರಿಮಾಡಿಕೊಳ್ಳಲಿಲ್ಲ. ಅದರ ಬದಲಿಗೆ ಆ ತಪ್ಪನ್ನು ಮುಚ್ಚಿಟ್ಟುಕೊಳ್ಳಲು ಹೋಗುತ್ತಿದ್ದೀರಿ. ಇನ್ನೊಂದು ದೊಡ್ಡ ಶೂನ್ಯಕ್ಕೆ ನೀವು ಹೋಗುತ್ತಿದ್ದೀರಿ. ಒಂದು ವೇಳೆ ಕೋರ್ಟ್‌ನಲ್ಲಿ ಸ್ಟೇ ಕೊಡಲಿಲ್ಲವೆಂದರೆ ಆಗ ನೀವು ಏನು ಮಾಡುತ್ತೀರಿ?

ಅಧ್ಯಕ್ಷರು: ಇದೆಲ್ಲಾ ಚರ್ಚೆ ಬೇಡ. ಈ ವಿಷಯ ಇಲ್ಲಿಗೇ ಮುಕ್ತಾಯವಾಗಿದೆ. ಮಾನ್ಯ ಸದಾನಂದಗೌಡರೇ, ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಸಮಾಜದ ಮತ್ತು ಜನತಂತ್ರದ ವಿರೋಧಿ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಇದು ಮೀಸಲಾತಿಗೆ ಮಾಡಿರತಕ್ಕಂಥ ಅಪಚಾರವಾಗಿದೆ. ಇದನ್ನು ನಾವು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರ ನೇತೃತ್ವದಲ್ಲಿ ಜನತಾದಳ(ಯು) ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಾನಂದಗೌಡರೇ, ತಾವು ತಮ್ಮ ವಿಷಯ ಪ್ರಸ್ತಾಪಿಸಿ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ವಾಕೌಟ್ ಮಾಡುತ್ತಿರುವುದು ಕೋರ್ಟಿನ ತೀರ್ಪಿನ ವಿರುದ್ಧವಾಗಿದೆ. ವಾಕೌಟ್ ಮಾಡುತ್ತಿರುವುದು ಕೋರ್ಟಿನ ಕಂಟೆಂಪ್ಟ್ ಆದಂತಾಗಿದೆ.

ಅಧ್ಯಕ್ಷರು: ಕೋರ್ಟ್‌ನಲ್ಲಿ ವಾದ ಮಾಡಿದಂತೆ ನಾವು ಇಲ್ಲಿ ಮಾಡುವುದಕ್ಕಾಗುತ್ತದೆಯೇ? ಮಾನ್ಯ ರಾಮದಾಸ್‌ರವರೇ, ಈ ವಿಷಯದ ಚರ್ಚೆ ಮುಕ್ತಾಯವಾಗಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸದಾನಂದಗೌಡರವರೇ, ತಮ್ಮ ವಿಷಯ ಪ್ರಸ್ತಾಪಿಸಿ.

(ಗೊಂದಲ)

ಅಧ್ಯಕ್ಷರು: ನಾನು ಕರೆದದ್ದು ಮಾನ್ಯ ಸದಾನಂದಗೌಡರು ಕೇಳಿಸಿಕೊಳ್ಳುತ್ತಿಲ್ಲ.